ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 5, Mar-Apr 2020, 61-66
©IIMRD, Mysuru
IIMRD JOURNALS
www.iimrd.com

# ಗ್ರಾಮೀಣ ಅಭಿವೃದ್ಧಿಯಲ್ಲಿ ಹೈನುಗಾರಿಕೆಯ ಪಾತ್ರ : ಒಂದು ವಿಶ್ಲೇಷಣೆ

ಮಾರುತಿ ಲಂಗೋಟಿ[1] ಮತ್ತು ಡಾ. ತಿಪ್ಪಣ್ಣಾ ಬಸಪ್ಪಾ ಕೋಲಕಾರ[2]

**ಪೀಠಿಕೆ**

ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ಶೇ.70ಕ್ಕೂ ಅಧಿಕ ಜನರು ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಿದ್ದು, ಇವರಲ್ಲಿ ಶೇ.80ಕ್ಕೂ ಅಧಿಕ ಜನರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಕೃಷಿಕರು ರಾಷ್ಟ್ರದ ಬೆನ್ನೆಲುಬಾಗಿದ್ದು, ದೇಶದ ಅಭಿವೃದ್ಧಿಗೆ ತಮ್ಮದೇಯಾದ ಕೊಡುಗೆಯನ್ನು ನೀಡುತ್ತಿದ್ದಾರೆ. ಗ್ರಾಮೀಣ ಭಾಗದ ಬಹುತೇಕ ಜನರು ವಿವಿಧ ರೀತಿಯ ಕೃಷಿ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಇವುಗಳಲ್ಲಿ ಪಶುಸಂಗೋಪನೆ/ಹೈನುಗಾರಿಕೆಯು ಪ್ರಮುಖವಾದುದಾಗಿದೆ. ಪ್ರಾಚೀನ ಕಾಲದಿಂದಲೂ ನಮ್ಮ ಪೂರ್ವಜರು ಗೋವುಗಳನ್ನು ಹೆಚ್ಚಾಗಿ ಸಾಕುತ್ತಿದ್ದರು. ಏಕೆಂದರೆ ಗೋವುಗಳು ಬಹುಪಯೋಗಿಯಾಗಿದ್ದು, ಹಾಲು ಮತ್ತು ಹಾಲಿನ ಉತ್ಪನ್ನಗಳು ಆಹಾರವನ್ನು ಪೂರೈಸಿದರೆ, ಸಗಣಿ ಮತ್ತು ಮೂತ್ರದಿಂದ ಗೊಬ್ಬರ ತಯಾರಿಸಿ ಬೆಳೆಗಳಿಗೆ ಬಳಸುತ್ತಿದ್ದರು.

ಹಿಂದಿನಿಂದ ಇಂದಿಗವರೆಗೂ ಅನೇಕ ಸಮುದಾಯಗಳು ಗೋವುಗಳ ಸಾಕಾಣಿಕೆಯಿಂದ ಸ್ವಾವಲಂಬಿ ಜೀವನವನ್ನು ಕಟ್ಟಿಕೊಂಡು ತಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಇಂದಿನ ದಿನಗಳಲ್ಲಿ ತಳವರ್ಗದಿಂದ ಮೇಲುವರ್ಗದ ಸಮುದಾಯಗಳು ಕೂಡ ಹಸು ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿದ್ದು, ತಮ್ಮ ದಿನನಿತ್ಯದ ಅಗತ್ಯತೆಗಳನ್ನು ಪೂರೈಸಿಕೊಳ್ಳುತ್ತಿದ್ದಾರೆ. ಭಾರತವು ಇಂದು ಹೈನುಗಾರಿಕೆಯಲ್ಲಿ ಅಗ್ರಸ್ಥಾನ ಪಡೆದಿದೆ ಮತ್ತು ಜಗತ್ತಿನ ಅತಿ ಹೆಚ್ಚು ಹಾಲು ಉತ್ಪಾದಕ ರಾಷ್ಟ್ರವೆಂದು ಪರಿಗಣಿಸಲ್ಪಟ್ಟಿದೆ.

ಹೈನುಗಾರಿಕೆ ಒಕ್ಕಲುತನಕ್ಕೆ ಸಹಾಯಕವಾದ ಮತ್ತು ಉಪಯುಕ್ತವಾದ ಉದ್ಯೋಗ. ಹಳ್ಳಿಗಳ ಆರ್ಥಿಕ ಪ್ರಗತಿ. ಅವುಗಳ ಉತ್ಪಾದನೆ ಹಾಗೂ ಉತ್ಪಾದಿತ ಸರಕುಗಳು ಮಾರಾಟದ ಮೇಲೆ ಅವಲಂಬಿಸಿದೆ. ಹಳ್ಳಿಗಳ ಆರ್ಥಿಕ ಸುಧಾರಣೆ ರಾಷ್ಟ್ರದ ಪ್ರಗತಿಗೆ ಹೆದ್ದಾರಿ. ಗ್ರಾಮೋದ್ಯೋಗಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಳ್ಳಿಗಳಲ್ಲಿ ಬೆಳೆಯಬೇಕು.ಇಂಥ ಪೂರಕ ಕೈಗಾರಿಕಾ ಗ್ರಾಮೋದ್ಯೋಗಗಳಲ್ಲಿ ಹೈನುಗಾರಿಕೆ ಮತ್ತು ಹೈನು ತಳಿ–ಅಭಿವೃದ್ಧಿ ಬಹಳ ಮಟ್ಟಿಗೆ ಸಹಾಯಕವಾದ ಉಪಕಸಬುಗಳಾಗಿವೆ.

[1] *ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.*
[2] *ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕಿತ್ತೂರು, ಬೆಳಗಾವಿ.*

ಬೇಸಾಯದ ಜೊತೆಗೆ ಹೈನುಗಾರಿಕೆ ಅಭಿವೃದ್ಧಿಯಾಗಬೇಕಾದರೆ, ಹೈನುಗಾರಿಕೆಗೆ ಹೆಚ್ಚಿನ ಉತ್ತೇಜನ ನೀಡಬೇಕು. ದೇಶದಲ್ಲಿ ಹಸಿರು ಕ್ರಾಂತಿ ಹಾಗೂ ಬಿಳಿಯ ಕ್ರಾಂತಿ ಇವೆರಡು ಒಂದಕ್ಕೊಂದು ಪೂರಕ ಮತ್ತು ಪೋಷಕ. ನಮ್ಮ ಹಳ್ಳಿಗಳಲ್ಲಿ ಒಕ್ಕಲುತನವೇ ಜೀವನೋಪಾಯದ ಒಂದು ಮುಖ್ಯ ಉದ್ಯೋಗವಾಗಿದೆ. ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಹಸಿರು, ಬಿಳಿ ಕೂಡಿದಾಗಲೇ ಹಳ್ಳಿಗಳ ಆರ್ಥಿಕ ಜೀವನಮಟ್ಟ ಉತ್ತಮವಾಗಿ ಸುಗಮವಾಗುವುದು. ಇದಕ್ಕಾಗಿಯೇ ಸರ್ವಜ್ಞ ಕವಿ "ಬತ್ತದಿಹ ಹೈನು ರೈತರ ಜೀವಾಳ" ಎಂದು ಹೇಳಿರುವುದು ಯಥಾರ್ಥವಾಗಿದೆ. "ತುರು ಕರು ಇಲ್ಲದ ಊರು, ನರಕ ಭಾಜನ ವಕ್ಕು। ತುರು–ಕರು ಕರೆದರೆ ಉಣಲುಂಟು. ತುರು–ಕರುವೆದೈವ ಸರ್ವಜ್ಞ" ಎಂದು ಹಾಡಿದ್ದಾನೆ. ಹೈನುಗಾರಿಕೆಯ ಉದ್ಯೋಗ ಇಂದಿನ ರೈತರ ಆರ್ಥಿಕ ಸಮಸ್ಯೆಯ ಪರಿಹಾರಕ್ಕೆ ಸ್ವಲ್ಪಮಟ್ಟಿಗಾದರೂ ಸಹಾಯಕವಾಗುವುದು. ರೈತಬಾಂಧವರು ಹೈನುಗಾರಿಕೆ ಉದ್ಯೋಗದಲ್ಲಿ ನಿರತರಾಗಿ, ಸಂದರ್ಭಕ್ಕೆ ಸರಿಯಾಗಿ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತರಾಗಬೇಕು. ಹೈನುಗಾರಿಕೆ ಬೆಳವಣಿಗೆಗೆ ಹಳ್ಳಿಗಳಲ್ಲಿ ವಿಪುಲ ಅವಕಾಶವಿದೆ ಹಾಗೆಯೇ ಗ್ರಾಮೀಣಾಭಿವೃದ್ಧಿಗೆ ಹೈನುಗಾರಿಕೆ ಸಹಾಯವಾಗಿದೆ.

ಹೀಗಾಗಿ ಹಸುಸಾಕಾಣಿಕೆ ನಮ್ಮ ಸಾಮಾಜಿಕ, ಆರ್ಥಿಕಜೀವನದಲ್ಲಿ ಕ್ಷೀರೋತ್ಪಾದನೆ ಮೂಲಕ ಪ್ರಮುಖ ಸ್ಥಾನ ಪಡೆದಿದೆ. ನಮ್ಮ ದೇಶದಲ್ಲಿ ವರ್ಷಕ್ಕೆ 165 ಮಿಲಿಯನ್ ಟನ್‌ಗಳಷ್ಟು ಹಾಲು ಉತ್ಪಾದನೆಯಾಗುತ್ತದೆ. ಇದರಲ್ಲಿ ಶೇಕಡ 70ರಷ್ಟು ಹಾಲು ಹಳ್ಳಿಗಳಲ್ಲಿ ಉತ್ಪಾದನೆಯಾಗುತ್ತದೆ. ಹಳ್ಳಿಗಳಲ್ಲಿ ಉತ್ಪನ್ನವಾದ ಹಾಲಿನಲ್ಲಿ ಶೇಕಡ 40ರಷ್ಟು ಹಾಲು ಹಳ್ಳಿಗಳಲ್ಲಿಯೇ ತಮ್ಮ ಸ್ವಂತ ಉಪಯೋಗಕ್ಕಾಗಿ ಬಳಸಿಕೊಂಡು ಉಳಿದ ಶೇಕಡ 60ರಷ್ಟನ್ನು ಮಾರಾಟಕ್ಕಾಗಿ ಬಿಡುಗಡೆ ಮಾಡಲಾಗುತ್ತಿದೆ. ಹಳ್ಳಿಗಳಲ್ಲಿ ಉಳಿದ ಹಾಲಿನಿಂದ ಖೋವಾ, ಚಕ್ಕಾ, ಹಾಲಿನಪುಡಿ, ತುಪ್ಪ, ಬೆಣ್ಣೆ, ಕೇಶಿನ್, ಚೇಸ್‌ಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ಇಂತಹ ಕೈಗಾರಿಕಾ ವಸ್ತುಗಳನ್ನು ಹಳ್ಳಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲು ಗ್ರಾಮೋದ್ಯೋಗ ಕೇಂದ್ರಗಳನ್ನು ಸ್ಥಾಪಿಸಲು ಅನುಕೂಲವಿದೆ. ಈ ಉದ್ಯೋಗಗಳಿಂದ ಇಂದು ನಿರುದ್ಯೋಗ ಯುವಕರಿಗೆ ಉದ್ಯೋಗ ದೊರೆತಂತಾಗುತ್ತದೆ. ಹೀಗೆ ಈ ಹೈನುಗಾರಿಕೆ ಉದ್ದಿಮೆಯು ಅಧಿಕ ಆದಾಯವನ್ನು ನೀಡುವ ಹಾಗೂ ಯುವಕರಿಗೆ ಉದ್ಯೋಗದ ಅವಕಾಶಗಳನ್ನು ಪೂರೈಸುವುದರಲ್ಲಿ ಮುಖ್ಯ ಸಾಧನವಾಗಿದೆ.

ಸತೀಶ ನರಗುಂಡೆ ಮತ್ತು ಅಮರ್ಜೆ (2013) ರವರು ತಮ್ಮ ಸಂಶೋಧನಾ ಲೇಖನದಲ್ಲಿ ರೈತರು ತಮ್ಮ ಕೃಷಿ ಚಟುವಟಿಕೆಯ ಜೊತೆಗೆ ಹೈನುಗಾರಿಕೆಯನ್ನು ಕೈಗೊಂಡರೆ ಅವರ ವರಮಾನ/ಆದಾಯವೂ ಕೂಡ ಹೆಚ್ಚಾಗುತ್ತದೆ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸಾಮಾನ್ಯವಾಗಿ ಸಣ್ಣ ಮತ್ತು ಮಧ್ಯಮ ಹಿಡುವಳಿದಾರರು, ಭೂರಹಿತ ಕಾರ್ಮಿಕರು ಮತ್ತು ಮಹಿಳೆಯರು ಸಹಜವಾಗಿಯೆ ದುರ್ಬಲರಾಗಿದ್ದಾರೆ. ಹೈನುಗಾರಿಕೆಯ ವೃತ್ತಿಯು ಇವರ ಶ್ರೇಯಸ್ಸಿಗೆ ನಾಂದಿಯಾಗಿದೆ. ಜೊತೆಗೆ ವರ್ಷವಿಡೀ ಉದ್ಯೋಗದ ಜೊತೆಗೆ ಆದಾಯವನ್ನು ಒದಗಿಸುತ್ತಿರುವುದುನ್ನು ಕಾಣಬಹುದಾಗಿದ್ದು ಹೈನುಗಾರಿಕೆ ಗ್ರಾಮೀಣ ಜನರಿಗೆ ವರ್ಷವಿಡೀ ಆದಾಯ ತರುವ ಮೂಲವಾಗಿದೆ ಎಂದು ಹೇಳಿದ್ದಾರೆ. ಇದನ್ನು ಗಮನಿಸಿದಾಗ ಮಧ್ಯಮ ಗಾತ್ರದ ಹಿಡುವಳಿದಾರರಿಗೆ ಮತ್ತು ನೀರಾವರಿ ಭೂಮಿಯನ್ನು ಹೊಂದಿರುವವರಿಗೆ ಹೈನುಗಾರಿಕೆ ಮತ್ತು

ಬೆಳೆಯ ಉತ್ಪಾದನೆಯು ಕೂಡ ಅಧಿಕ ಎಂಬುವುದು ಕಂಡು ಬರುತ್ತದೆ. ಒಟ್ಟಾರೆಯಾಗಿ ನೋಡುವುದಾದರೆ ಕೃಷಿಯ ಮೂಲದಿಂದ ಬರುವ ಆದಾಯಕ್ಕಿಂತಲೂ ಹೈನುಗಾರಿಕೆಯಿಂದ ಬರುವ ಆದಾಯವೇ ಅಧಿಕವಾಗಿದೆ. ಜೊತೆಗೆ ಇದನ್ನು ಪೂರ್ಣ ಪ್ರಮಾಣದ ವೃತ್ತಿಯಾಗಿ ಕೈಗೊಂಡಿರುವುದು ಕೂಡ ಸತ್ಯ. ಇದರಿಂಲೇ ಅಲ್ಲಿಯ ಜನರ ಸಮಾಜೋ–ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ ಎಂಬುವುದು ಕಂಡು ಬರುತ್ತದೆ.

ನರಸಿಂಹಮೂರ್ತಿ. (2006) ರವರು ತಮ್ಮ ಕೃತಿಯಲ್ಲಿ ಆಧುನಿಕ ಹೈನುಗಾರಿಕೆಯ ಬಗ್ಗೆ ವಿವರಿಸಿದ್ದಾರೆ. ಕೃಷಿಯನ್ನೇ ಅವಲಂಬಿಸಿರುವ ರೈತರು ಅದರ ಮುಖಾಂತರವೇ ತಮ್ಮ ಜೀವನವನ್ನು ನಿರ್ವಹಿಸಬೇಕಾಗಿರುವಂತಹ ಸಂದರ್ಭದಲ್ಲಿ ಕಾಲಕ್ಕೆ ತಕ್ಕಂತೆ ಮಳೆಯಾಗದಿರುವುದ್ದರಿಂದ ತಮ್ಮ ದಿನನಿತ್ಯದ ಜೀವನವನ್ನು ಸಾಗಿಸುವುದು ತುಂಬಾ ಚಿಂತಾಜನಕವಾಗಿದೆ. ಅಲ್ಲದೆ ಭೂಮಿಯು ಕೂಡ ತನ್ನ ಫಲವತ್ತದೆಯನ್ನು ಕಳೆದುಕೊಳ್ಳುತ್ತಿದೆ. ವರ್ಷದಲ್ಲಿ ಕೆಲವು ಕಾಲ ಕೃಷಿಯನ್ನು ಕೈಗೊಂಡರು ಕೂಡ ಅದರಿಂದ ಬರುವಂತಹ ಆದಾಯವು ಕೂಡ ಅಷ್ಟಕಷ್ಟೇ ಆಗಿದೆ. ಇದಕ್ಕೆ ಪೂರಕವಾಗಿರುವಂತೆ ಇತ್ತಿಚೆಗೆ ಹೈನುಗಾರಿಕೆಯನ್ನು ಕೃಷಿಗೆ ಪೂರಕವಾಗಿರುವಂತೆ ಕೈಗೊಳ್ಳಲಾಗುತ್ತಿದೆ. ಹಸು ಸಾಕಾಣಿಕೆಯು ಬಹಳ ವರ್ಷಗಳಿಂದಲೇ ಸಾಕುವುದು ಕಂಡು ಬಂದರು ಕೂಡ ಅದು ಕೇವಲ ತಮ್ಮಕುಟುಂಬದ ಉಪಯೋಗಕ್ಕಾಗಿ ಮಾತ್ರ ಇತ್ತು. ಆದರೆ ಈಗ ಇದೊಂದು ಉದ್ಯಮವಾಗಿ ಕಂಡುಬಂದಿದೆ. ಕೃಷಿಯಲ್ಲಿ ಇದನ್ನು ಉಪ ಕಸುಬಿನ ರೀತಿಯಲ್ಲಿ ಹೈನುಗಾರಿಕೆಯನ್ನು ಮಾಡುತ್ತಿದ್ದಾರೆ. ಹೈನುಗಾರಿಕೆಯು ರೈತರಿಗೆ ಲಾಭದಾಯಕವು ಹಾಗೂ ಕಸುಬಾಗಿಯೂ ಇದೆ. ಆದರೆ ಸಾಂಪ್ರದಾಯಿಕ ಹೈನುಗಾರಿಕೆಗೆ ಹೋಲಿಕೆ ಮಾಡಿದರೆ ಆಧುನಿಕ ಹೈನುಗಾರಿಕೆಯು ರಾಸುಗಳ ಪಾಲನೆ, ಪೋಷಣೆ, ಹಾಲಿನ ಉತ್ಪಾದನೆ ಹಾಗೂ ಅವುಗಳ ನಿರ್ವಹಣೆಯಲ್ಲಿ ಆಧುನಿಕ ಹೈನುಗಾರಿಕೆ ಪದ್ಧತಿಯು ರೈತರಿಗೆ ಲಾಭದಾಯಕವಾಗಿದೆ ಎಂಬುವುದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲ. ವೈಜ್ಞಾನಿಕ ವಿಧಾನದ ಮುಖಾಂತರ ಹೈನುಗಾರಿಕೆಯನ್ನು ಕೈಗೊಳ್ಳುವುದು ಒಳ್ಳೆಯದು ಮತ್ತು ಲಾಭದಾಯಕವಾಗಿದೆ ಎಂಬುದಾಗಿ ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಈ ಅಂಶದಿಂದ ಸಾಂಪ್ರದಾಯಿಕ ಹೈನುಗಾರಿಕೆಗೆ ಬದಲಾಗಿ ವೈಜ್ಞಾನಿಕ ವಿಧಾನದ ಮುಖಾಂತರ ಹೈನುಗಾರಿಕೆಯನ್ನು ಕೈಗೊಳ್ಳುವುದು ಆರ್ಥಿಕತೆಯ ದೃಷ್ಟಿಯಿಂದ ಅನುಕೂಲಕರ ಎಂಬ ಅಂಶವನ್ನು ಮನಗಾಣಬಹುದಾಗಿದೆ.

ಶೀಲಾ ಕೆ.ಎಸ್ ಮತ್ತು ರಾಮೇಗೌಡ.ಎ (2016) ರವರು ತಮ್ಮ ಅಧ್ಯಯನದಲ್ಲಿ ಹೈನೋದ್ಯಮವು ಗ್ರಾಮೀಣ ಅಭಿವೃದ್ಧಿಯಲ್ಲಿ ಯಾವ ರೀತಿಯ ಪಾತ್ರವಹಿಸುತ್ತದೆ ಎಂಬುದನ್ನು ವಿವರಿಸಿದ್ದಾರೆ. ಗ್ರಾಮೀಣ ಕುಟುಂಬಗಳು ಬಹುತೇಕವಾಗಿ ಸಾಂಪ್ರದಾಯಿಕ ಕೃಷಿಸಂಬಂಧಿ ಕಸುಬಾಗಿ ಹೈನುಗಾರಿಕೆ ಕೈಗೊಂಡಿದ್ದು. ಹೈನುಗಾರಿಕೆಯಲ್ಲಿ ಹೆಚ್ಚಾಗಿ ಮಧ್ಯ ವಯಸ್ಸಿನವರು ತೊಡಗಿರುವುದಲ್ಲದೇ ಸ್ತ್ರೀಪುರುಷರು ಸಮಪ್ರಮಾಣದಲ್ಲಿ ಆಸಕ್ತಿವಹಿಸಿ ಹೈನುಗಾರಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ಹೈನುಗಾರಿಕೆಯಲ್ಲಿ ವಿಶೇಷವಾಗಿ ಒಕ್ಕಲಿಗರು ಮತ್ತು ಲಿಂಗಾಯಿತ ಜಾತಿಯವರು ಪ್ರಮಾಣ ಅಧಿಕವಾಗಿದೆ ಎಂಬುದಾಗಿ ಹೇಳಿದ್ದಾರೆ. ಹೈನುಗಾರಿಕೆಯಿಂದ ಕುಟುಂಬದ ಆರ್ಥಿಕ ಸ್ಥಿತಿ ಉತ್ತಮವಾಗುವುದರ ಮುಖೇನ ಅನೇಕ ಸಮಸ್ಯೆಗಳ ಪರಿಹಾರಕ್ಕೆ ಸಹಾಯಕವಾಗುತ್ತದೆ ಎಂಬುದಾಗಿ

ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರ ಅಧ್ಯಯನವನ್ನು ನೋಡುವುದಾದರೆ ಕುಟುಂಬ ನಿರ್ವಹಣೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ, ವಿವಾಹ, ಹಬ್ಬಹರಿದಿನಗಳ ಆಚರಣೆ ಮುಂತಾದವುಗಳಿಗೆ ಇದು ನೆರವಾಗುತ್ತದೆ ಎಂಬುದನ್ನು ಮನಗಾಣಬಹುದಾಗಿದೆ. ಹಾಲು ಉತ್ಪಾದಕ ಸಹಕಾರಿ ಸಂಘಗಳ ಉತ್ತಮ ರೀತಿಯ ಕಾರ್ಯವೈಖರಿಯನ್ನು ಹೊಂದಿದೆ. ಅಲ್ಲದೆ ಸಂಘದ ಸದಸ್ಯರಿಗೆ ಎಲ್ಲಾ ರೀತಿಯ ಅನುಕೂಲತೆಯನ್ನು ನೀಡುತ್ತಿದೆ ಜೊತೆಗೆ ಸಹಕಾರಿ ಸಂಘಗಳು ಸಹ ಲಾಭದಾಯಕದಲ್ಲಿ ಇವೆ ಎಂಬುವುದು ಹೆಮ್ಮೆಯ ವಿಷಯವಾಗಿದೆ. ಮೊದಲು ಕೇವಲ ಕೃಷಿ ಕ್ಷೇತ್ರದ ಉಪಕಸುಬಾಗಿದ್ದ ಹೈನುಗಾರಿಕೆಯು ಇಂದು ಹೈನು ಉದ್ಯಮವಾಗಿ ಮಾರ್ಪಟ್ಟು ಆದಾಯದ ಮೂಲವಾಗಿದೆ. ಜೊತೆಗೆ ಸ್ವಯಂ–ಉದ್ಯೋಗವನ್ನು ಹೊಂದಲು ಖಾಯಂ ಆದಾಯ, ಮೋಸವಿಲ್ಲದಂತೆ ಗ್ರಾಮದಲ್ಲಿ ವರ್ಷವಿಡೀ ಮಾರುಕಟ್ಟೆಯ ಮುಖಾಂತರ ದೊರೆಯುತ್ತದೆ ಎಂಬುದಾಗಿ ಸಂಶೋಧನಕರು ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ.

ಪ್ರೇಮರಾಜ. (2017) ರವರು ತಮ್ಮ ಲೇಖನದಲ್ಲಿ ಗ್ರಾಮೀಣ ಅಭಿವೃದ್ಧಿಯಲ್ಲಿ ಹೈನುಗಾರಿಕೆಯು ಯಾವ ರೀತಿ ತನ್ನ ಪಾತ್ರವನ್ನು ಹೊಂದಿದೆ ಎಂಬುವುದನ್ನು ತಿಳಿಸುತ್ತದೆ. ಇದು ನೇಪಾಳದಲ್ಲಿನ ವಿ.ಡಿ.ಸಿ ಜನಹಿತ ಹಾಲು ಉತ್ಪಾದಕ ಸಹಕಾರಿ ಸಂಘದ ಕುರಿತು ನಡೆದಂತಹ ಅಧ್ಯಯನವಾಗಿದೆ ಈ ಸಂಘವು ಗ್ರಾಮಗಳು ಅಭಿವೃದ್ಧಿಯನ್ನು ಹೊಂದಬೇಕಾದರೆ, ಗ್ರಾಮೀಣಜನರಿಗೆ ಬಹುಮುಖ್ಯವಾಗಿ ಉದ್ಯೋಗವನ್ನು ನೀಡಬೆಕು. ಈ ರೀತಿಯ ಕೆಲಸವನ್ನು ಇಲ್ಲಿಯ ಸಹಕಾರಿ ಸಂಘವು ಪರೋಕ್ಷವಾಗಿ ಮಾಡುತ್ತಿದೆ. ಹೇಗೆಂದರೆ, ಈ ಸಂಘವು ಗ್ರಾಮೀಣಜನರ ಹಾಲನ್ನು ಸಂಗ್ರಹಿಸಿ ಅದನ್ನು ಮಾರಾಟ ಮಾಡುವುದರ ಮುಖಾಂತರ ಗ್ರಾಮೀಣಜನರ ಬಡತನ, ನಿರುದ್ಯೋಗ ನಿವಾರಣೆಯಲ್ಲಿ ಸಹಾಯಕವಾಗಿದೆ. ಇದು ಕೇವಲ ಹಾಲನ್ನು ಮಾರಾಟ ಮಾಡುವುದು ಮಾತ್ರವಲ್ಲದೆ ಸಂಘದ ಅಭಿವೃದ್ಧಿಗೆ ಬೇಕಾಗಿರುವಂತಹ ವಿವಿಧ ಕಾರ್ಯಕ್ರಮಗಳನ್ನು ಮಾಡುತ್ತಿವೆ. ಸಹಕಾರಿ ಸಂಘವು ಕೂಡ ಹಾಲಿನ ಗುಣಮಟ್ಟದ ಮೇಲೆ ದರವನ್ನು ನಿಗದಿ ಮಾಡುತ್ತದೆ. ಇದರಿಂದ ಗುಣಮಟ್ಟದ ಹಾಲಿನ ಸಂಗ್ರಹಣೆಯ ಜೊತೆಗೆ ಉತ್ತಮ ಬೆಲೆಯಲ್ಲಿ ಹಾಲನ್ನು ಪಡೆಯಲು ಅನೂಕೂಲಕರವಾಗಿದೆ ಎಂಬುದಾಗಿ ಹೇಳಿದ್ದಾರೆ. ಅಂದರೆ ಈ ಅಧ್ಯಯನದಿಂದ ತಿಳಿದು ಬರುವ ವಿಷಯವೆನೆಂದರೆ ಸಣ್ಣ ಪ್ರಮಾಣದ ಹೈನುಗಾರಿಕೆಯನ್ನು ಕುಟುಂಬದ ಕಲ್ಯಾಣಕ್ಕಾಗಿ ಕೈಗೊಳ್ಳುವುದರ ಜೊತೆಗೆ ಹೈನುಗಾರಿಕೆಯು ಗ್ರಾಮೀಣ ಜನರ ಜೀವನೋಪಾಯಕ್ಕೆ ಸಹಾಯಕವಾಗಿದೆ. ಅಲ್ಲದೆ ಗ್ರಾಮೀಣ ಜನರ ಆರ್ಥಿಕತೆಯನ್ನು ಬಲಗೊಳಿಸಲು ಉಪಯುಕ್ತಕಾರಿಯಾಗಿದೆ. ಈ ಸಂಘವು ಗ್ರಾಮೀಣ ಜನರ ವರ್ಧನೆಗೆ ತನ್ನದೆಯಾದ ಕೊಡುಗೆಯನ್ನು ನೀಡಿದೆ ಹಾಗೂ ಜನರು ನೆಮ್ಮದೆಯ ಜೀವನವನ್ನು ಸಾಗಿಸಲು ಸಹಾಯಕಾರಿಯಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದಾಗಿದೆ.

ದೇಶದಲ್ಲಿಯ ಪ್ರತಿಯೊಬ್ಬರಿಗೂ ಹಾಲು ಮತ್ತು ಹಾಲಿನ ಉತ್ಪನ್ನಗಳು ತುಂಬಾ ಅವಶ್ಯಕವಾದ ವಸ್ತುವಾಗಿವೆ. ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯು ಆರೋಗ್ಯವಂತನಾಗಿರಬೇಕಾದರೆ ಹಾಲು ತುಂಬಾ ಉಪಯುಕ್ತಕಾರಿ ಅಲ್ಲದೆ ಮನಷ್ಯನಿಗೆ ಕನಿಷ್ಟವೆಂದರು ಪ್ರತಿದಿನಕ್ಕೆ 250 ಮೀ.ಗ್ರಾಂ.ನಷ್ಟು ಹಾಲು ಸೇವಿಸಬೇಕು ಎಂದು ಅಂತರಾಷ್ಟ್ರೀಯಮಟ್ಟದಲ್ಲಿ ಶಿಪಾರಸ್ಸು ಮಾಡಲಾಗಿದೆ. ಆ ಕಾರಣಕ್ಕಾಗಿ ಹಾಲು ಮನುಷ್ಯನ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯಕಾರಿಯಾಗಿದೆ. ಇಂದಿನ ದಿನಮಾನಗಳಲ್ಲಿ

ಹಾಲು ಉದ್ಧಿಮೆಯು ವಾಣಿಜ್ಯೋದ್ಯಮವಾಗಿ ಜಗತ್ತಿನಲ್ಲಿಯೇ ಅತೀ ಹೆಚ್ಚು ವರಮಾನವನ್ನು ತಂದು ಕೊಡುವಂತಹ ಉದ್ಧಿಮೆಯಾಗಿದೆ. ಕೃಷಿಕರು ತಮ್ಮ ದಿನನಿತ್ಯದ ಖರ್ಚು ವೆಚ್ಚಗಳನ್ನು ಸರಿದೂಗಿಸಿಕೊಂಡು ಹೋಗಲು ಇದನ್ನೊಂದು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಹೈನುಗಾರಿಕೆ ಎಂಬುವುದು ಇಂದಿನ ದಿನಮಾನಗಳಲ್ಲಿ ಉತ್ತಮ ರೀತಿಯ ಕಸುಬು ಆಗಿರುವುದರ ಜೊತೆಗೆ ಉದ್ಧಿಮೆಯಾಗಿ ಪರಿವರ್ತನೆಯಾಗಿದೆ. ಹೈನುಗಾರಿಕೆಯಲ್ಲಿ ತೊಡಗಿರುವಂತಹ ಜನರು ಹಾಲು ಉತ್ಪಾದಕ ಸಹಕಾರಿ ಸಂಘಗಳ ಮೂಲಕ ಯಾವ ರೀತಿಯಾಗಿ ಆರ್ಥಿಕ ಸುಧಾರಣೆಯನ್ನು ಕಂಡುಕೊಳ್ಳುತ್ತಿದ್ದಾರೆ. ಅಲ್ಲದೆ ಅದೇ ರೀತಿಯಾಗಿ ಹೈನುಗಾರಿಕೆಯಲ್ಲಿ ತೊಡಗಿರುವವರಿಗೆ ಸರ್ಕಾರದಿಂದ ಬರುವ ಅನೇಕ ಸೌಲಭ್ಯಗಳನ್ನು ದೊರಕಿಸಿಕೊಡುವಲ್ಲಿ ಸಹಾಯಕಾರಿಯಾಗಿದೆ.

**ಉಪಸಂಹಾರ**

ಭಾರತದೇಶವು ಹಳ್ಳಿಗಳನ್ನು ಒಳಗೊಂಡಿರುವಂತಹ ರಾಷ್ಟ್ರವಾಗಿದೆ. ಬಡತನ, ನಿರುದ್ಯೋಗದಂತಹ ಸಮಸ್ಯೆಗಳು ಇದ್ದರೂ ಕೂಡ ಅದನ್ನು ಹೋಗಲಾಡಿಸುವಲ್ಲಿ ಹೈನುಗಾರಿಕೆಯು ಸಹಾಯಕವಾಗಿದೆ. ಈ ಅಂಶಗಳಿಂದ ಹೈನುಗಾರಿಕೆ ಮತ್ತು ಗ್ರಾಮೀಣಅಭಿವೃದ್ಧಿಗೆ ನೇರವಾದ ಸಂಬಂಧವಿದೆ ಎಂಬ ಅಂಶವನ್ನು ತಿಳಿದುಕೊಳ್ಳಬಹುದಾಗಿದೆ. ಏಕೆಂದರೆ ಗ್ರಾಮಗಳ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಪೂರಕವಾದ ಉದ್ಯೋಗವನ್ನು ಕೈಗೊಂಡಾಗ ಮಾತ್ರ ಸಾಧ್ಯ, ಗ್ರಾಮಗಳ ಅಭಿವೃದ್ಧಿಗೆ ಹೈನುಗಾರಿಕೆಯು ನಿರಂತರವಾಗಿ ಆದಾಯವನ್ನು ತಂದು ಕೊಡುವುದು. ಸರಕಾರ, ಸಂಘಗಳು ಕೂಡ ಹೈನುಗಾರಿಕೆಯನ್ನು ಕೈಗೊಳ್ಳಲು ಹಲವಾರು ಯೋಜನೆಗಳನ್ನು ಜಾರಿಗೆ ತಂದು ರೈತರ ಯಶಸ್ಸಿಗೆ ಕಾರಣಿಭೂತರಾಗಬೇಕಿದೆ. ಗ್ರಾಮೀಣ ಮಟ್ಟದ ಜನರಿಗೆ ಹಸುಗಳನ್ನು ಕೊಳ್ಳಲು ಮತ್ತು ಅವರ ಹಾಲನ್ನು ಕೊಂಡುಕೊಳ್ಳಲು ಜೊತೆಗೆ ಅವರ ಆದಾಯವನ್ನು ವೃದ್ಧಿಸುವುದರ ಮುಖೇನ ಗ್ರಾಮಗಳು ಅಭಿವೃದ್ಧಿ ಹೊಂದಲು ಸಾಧ್ಯ, ಜೊತೆಗೆ ದೇಶದ ಆರ್ಥಿಕ ಸ್ಥಿತಿ ಸುದಾರಿಸಲು ಅನುಕೂಲವಾಗುತ್ತದೆ.

**ಪರಾಮರ್ಶ ಗ್ರಂಥಗಳು**


- ಡೇರಿಂಗ್ ಇನ್ ಇಂಡಿಯಾ. (1990). ಇಂಡಿಯ್‌ಡೇರಿ ಅಸೋಸಿಯೆಷೆನ್. ನ್ಯೂ ದೆಹಲಿ.
- ಕರ್ನಾಟಕ ಕೃಷಿಕರ ಸಂಪನ್ಮೂಲ ಕೇಂದ್ರದ ಕೈಪಿಡಿ. (2018). ಕರ್ನಾಟಕ ಕೃಷಿಕರ ಸಂಪನ್ಮೂಲ ಕೇಂದ್ರ, ಬೆಂಗಳೂರು.
- ಕುರಿಯನ್.ವಿ. (2004). ಕ್ಷೀರೋತ್ಪಾದನೆ ಮತ್ತು ಗ್ರಾಮೀಣಾಭಿವೃದ್ಧಿ, ಯೋಜನಾ, ನವದೆಲಿ.
- ಮಂಜುನಾಥ.ಎಲ್.ಹೆಚ್. (2018). ಹೈನುಗಾರಿಕೆಯಲ್ಲಿ ತಂತ್ರಜ್ಞಾನದ ಬಳಕೆ. ಎಸ್.ಕೆ.ಡಿ.ಆರ್.ಡಿ.ಪಿ., ಧರ್ಮಸ್ಥಳ.
- ನರಸಿಂಹಮೂರ್ತಿ. (2006). ಅಧಿಕ ಲಾಭಕ್ಕಾಗಿ ಆಧುನಿಕ ಹೈನುಗಾರಿಕೆ. ಕೃಷಿ ವಿಕಾಸ ಪಬ್ಲೀಕೇಶನ್ಸ್, ಬೆಂಗಳೂರು.

- ಪ್ರೇಮರಾಜ. (2017). ಗ್ರಾಮೀಣ ಅಭಿವೃದ್ಧಿಯಲ್ಲಿ ಹೈನುಗಾರಿಕೆಯ ಪಾತ್ರ. ಇಲ್ಲಮ್, ನೇಪಾಳ.
- ಸತೀಶ ನರಗುಂಡೆ ಮತ್ತು ಅಮರ್ಜೆ. (2013). ಭಾರತದ ಗ್ರಾಮೀಣ ಅಭಿವೃದ್ಧಿಯಲ್ಲಿ ಡೈರಿ ಉದ್ಯಮದ ಪಾತ್ರ. ಆಯ್.ಎ.ಇ.ಎಮ್.ಇ.
- ಶೀಲಾ.ಕೆ.ಎಸ್. ಮತ್ತು ರಾಮೇಗೌಡ ಎ. (2016). ಹೈನೋದ್ಯಮ ಮತ್ತು ಗ್ರಾಮೀಣ ಅಭಿವೃದ್ಧಿ. ಜನಸ್ಪಂದನ ಟ್ರಸ್ಟ್ (ರಿ), ಶಿಕಾರಿಪುರ.